ಹತ್ತು ಕೃಷಿ ವಲಯಗಳಲ್ಲಿ ಕನಿಷ್ಠ ಒಂದೊಂದು ತಾಲ್ಲೂಕಿನಲ್ಲಿ ಪ್ರತಿ ಗ್ರಾಮದಲ್ಲೂ ಒಂದೆರಡು-ಮೂರು ಡೆಮಾನ್‌ಸ್ಟ್ರೇಶನ್ ಪ್ಲಾಟ್‌ನ್ನು ನೀವು ಮಾಡಿಸಿದಿರಿ ಎಂದರೆ we can motive other farmers. ಈ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಾ ಎಂದು ನಾನು ಕೇಳಿದ್ದೇನೆ. ದಯವಿಟ್ಟು ತೆಗೆದುಕೊಳ್ಳುತ್ತೇವೆ ಎನ್ನುವಂಥ ಭರವಸೆ ತಮ್ಮಿಂದ ಬರಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜೇಂದ್ರಸಿಂಗ್ ಅವರು ಕರ್ನಾಟಕಕ್ಕೆ ಬಂದುಹೋಗಿದ್ದಾರೆ. ಬೇರೆ ಬೇರೆ ಕಡೆಗೆ ಈ ರೀತಿಯಾದಂಥ ಸರ್ಕಾರಿಯೇತರ ಸ್ವಯಂ ಸೇವಾ ಸಂಸ್ಥೆಗಳು ಈ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಮಳೆಕೊಯ್ಲಿನ ವಿಚಾರದಲ್ಲೂ ಕೂಡ ಪ್ರಯತ್ನವನ್ನು ಮಾಡುತ್ತಿದ್ದಾರೆ. ತಾವು ಹೇಳಿದಂತೆ ಪ್ರಾತಕ್ಷಿಕೆಗಳನ್ನು ಮಾಡಿದಾಗ ಬೇರೆಯವರ ಮೇಲೆ ಅದರ ಪ್ರಭಾವ ಆಗುತ್ತದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಈ ಕೃಷಿ ವಲಯಗಳು ಏನಿವೆ ಅಲ್ಲಿ ನಾವು ಈ ಕೆಲಸವನ್ನು ಮಾಡಲಿಕ್ಕೆ ನಮ್ಮ ಕೃಷಿ ಸಚಿವರನ್ನೂ ಕೂಡ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯವರಿಗೂ ಕೂಡ ಈ ವಿಚಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸರ್ಕಾರಿ ವಿಮಾ ಇಲಾಖೆಯ ವಿಮಾ ಪಾಲಿಸಿಗಳ ಮೇಲಿನ ಸಾಲದ ಬಡ್ಡಿದರ ಇಳಿಸುವ ಬಗ್ಗೆ

69 (622) : ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರಕಾರಿ ವಿಮಾ ಇಲಾಖೆಯ ಈಗಿನ ಆರ್ಥಿಕ ಸ್ಥಿತಿಗತಿಗಳೇನು;

ಆ) ವಿಮಾ ಇಲಾಖೆಯು ವಾರ್ಷಿಕ ಬೋನಸ್ ದರ ಕಡಿಮೆ ಮಾಡಲು ಕಾರಣಗಳೇನು;

ಇ) ಸರ್ಕಾರ ವಿಮಾ ಪಾಲಿಸಿಗಳ ಮೇಲಿನ ಸಾಲದ ಬಡ್ಡಿ ಇಳಿಸಲು ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು 100 ವರ್ಷಗಳಿಗಿಂತಲೂ ಅಧಿಕ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಇದುವರೆವಿಗೂ ಯಾವುದೇ ಸಂದರ್ಭದಲ್ಲಿ ನಷ್ಟ ಅನುಭವಿಸದೇ ಲಾಭದಲ್ಲಿ ಮುನ್ನಡೆಯುತ್ತಿದ್ದು, ಪ್ರಸ್ತುತ ವಿಮಾ ನಿಧಿಯು 2/2004ಕ್ಕೆ ಕೊನೆಗೊಂಡಂತೆ ರೂ. 2105.72 ಕೋಟಿಯಾಗಿರುತ್ತದೆ. ಇದರಿಂದ ಇಲಾಖೆಯು ಆರ್ಥಿಕ ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂಬ ಅಂಶ ವೇದ್ಯ ಸಂಗತಿ.

ಆ) 1996-98ನೇ ಸಾಲಿನ ಮೌಲ್ಯಮಾಪನದ ಅಂಶಗಳನ್ನು 1998-2000ನೇ ಸಾಲಿನ ಪಾಲಿಸಿಗಳ ಮೌಲ್ಯಮಾಪನ ಮಾಡುವ ಬಗ್ಗೆ ಪರಿಶೀಲಿಸಿದಾಗ ವಿಮಾನಿಧಿಯ ಬೆಳವಣಿಗೆ ಹಿಂದಿನ ಅವಧಿಯಲ್ಲಿದ್ದಂತೆ ಆಶಾದಾಯಕವಿಲ್ಲದೆ ಇರುವುದರಿಂದ ಮತ್ತು ಮಾರುಕಟ್ಟೆಯಲ್ಲಿ ಬಡ್ಡಿದರಗಳು ಕಡಿಮೆಯಾಗುತ್ತಿದ್ದು, ಅದರಂತೆಯೇ ವಿಮಾ ನಿಧಿಯ ಮೇಲಿನ ಬಡ್ಡಿಯ ದರಗಳು ಕಡಿಮೆಯಾಗಿದ್ದು ಇವುಗಳಿಂದ ಸರಾಸರಿ ವಿಮಾ ನಿಧಿಯ ಮೇಲೆ ಪರಿಣಾಮವಾಗಿ ಜವಾಬ್ದಾರಿಗಳು ಹೆಚ್ಚುತ್ತಿರುವುದನ್ನು ಪರಿಶೀಲಿಸಿ ಬೋನಸ್‌ದರದಲ್ಲಿ ಸ್ವಲ್ಪಮಟ್ಟಿಗೆ ಇಳಿಮುಖವಾಗಿರುವುದನ್ನು ವಿಮಾ

ಗಣಕರು ಮೌಲ್ಯಮಾಪನ ವರದಿಯಲ್ಲಿ ತಿಳಿಸಿದ್ದು ಅದರಂತೆ ಬೋನಸ್‌ದರದಲ್ಲಿ ಕಡಿಮೆಯಾಗಿರುತ್ತದೆ. 1996–1998ಕ್ಕೆ ಕೊನೆಗೊಂಡ ಮೌಲ್ಯಮಾಪನದಂತೆ ನಿಗಧಿಪಡಿಸಿದ ಪಾಲಿಸಿ ಲಾಭಾಂಶ (ಬೋನಸ್)ವನ್ನು 1998–2000ಕ್ಕೆ ಹೋಲಿಸಿದಾಗ, ಬೋನಸ್ ದರವನ್ನು ಇಳಿಸಿರುವುದು ನಿಜವಾದರೂ ಈ ರೀತಿಯಾಗಲು ಸರ್ಕಾರವು ಈ ಕೆಳಕಂಡಂತೆ ವಿಮಾನಿಧಿಯ ಮೇಲೆ ನೀಡಿದ ಬಡ್ಡಿಯನ್ನೂ ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ.

01–04–1986 ರಿಂದ	31–3–2000	ಶೇ. 12 ಬಡ್ಡಿ
01–04–2000 ರಿಂದ	31–3–2001	ಶೇ. 11 ಬಡ್ಡಿ
01–04–2001 ರಿಂದ	31–3–2002	ಶೇ. 9.5 ಬಡ್ಡಿ
01–04–2002 ರಿಂದ	31–3–2003	ಶೇ. 9 ಬಡ್ಡಿ
01–04–2003 ರಿಂದ	---	ಶೇ. 8 ಬಡ್ಡಿ

ವಿಮಾ ನಿಧಿಯ ಸ್ಥಿರತೆಯನ್ನು ಕಾಪಾಡಿಕೊಂಡು ಬರಲು ವಿಮಾ ಬೋನಸ್ ದರ ಕಡಿಮೆ ಮಾಡುವುದು ಅನಿವಾರ್ಯವಾಗಿದೆ.

ಇ) ಪ್ರಸ್ತುತ ವಿಮಾ ಪಾಲಿಸಿಗಳ ಮೇಲಿನ ಸಾಲದ ಬಡ್ಡಿದರವು ಶೇ. 9 ಇದ್ದು ಸದರಿ ಬಡ್ಡಿಯ ವರಮಾನವು ವಿಮಾ ನಿಧಿಗೆ ಸೇರಿಸಲ್ಪಟ್ಟು ಅಂತಿಮವಾಗಿ ವಿಮಾ ಪಾಲಿಸಿಗಳ ಮೌಲ್ಯಮಾಪನ ಮಾಡುವಾಗ್ಗೆ ಸದರಿ ವರಮಾನವು ಲಾಭಾಂಶ ನೀಡಿಕೆಯಲ್ಲಿ ಪರಿಗಣಿಸಲ್ಪಡುತ್ತದೆ. ರಾಷ್ಟ್ರೀಯ ಬ್ಯಾಂಕುಗಳು ಹಾಗೂ ಮತ್ತಿತರ ಬ್ಯಾಂಕುಗಳಲ್ಲಿಯೂ ಗೃಹ ನಿರ್ಮಾಣದ ಸಾಲವನ್ನು ಹೊರತುಪಡಿಸಿ ಇತರೆ ಸಾಲದ ಮೇಲಿನ ಬಡ್ಡಿ ದರಗಳು ಶೇ. 12 ರಂತೆ ಹೆಚ್ಚಿನ ದರದಲ್ಲಿರುತ್ತದೆ. ಪ್ರಸ್ತುತ ವಿಮಾ ನಿಧಿಯ ಬೆಳವಣಿಗೆಯ ದೃಷ್ಟಿಯಿಂದ ಪಾಲಿಸಿಗಳ ಸಾಲದ ಮೇಲಿನ ಬಡ್ಡಿ ದರವು ಈಗಿನ ದರದಲ್ಲಿಯೇ ಮುಂದುವರೆಯುವುದು ಸೂಕ್ತವಾಗಿದೆ.

ಶ್ರೀ ಗಂಗಾಧರ ನಾಗೇಶ್ ಭಟ್ : ಮಾನ್ಯ ಅಧ್ಯಕ್ಷರೇ, 1980ರಲ್ಲಿ ಇತರೆ ಬ್ಯಾಂಕುಗಳಲ್ಲಿ ಸಾಲಕ್ಕೆ 20 ಪರ್ಸೆಂಟ್ ಬಡ್ಡಿ ಇತ್ತು. ಆವಾಗ ಕೆ.ಜಿ.ಐ.ಡಿ. ಯವರು 9 ಪರ್ಸೆಂಟ್ ಬಡ್ಡಿಯಲ್ಲಿ ಸರ್ಕಾರಿ ನೌಕರರಿಗೆ ಸಾಲವನ್ನು ಕೊಡುತ್ತಿದ್ದರು. ಈಗ ಇತರೆ ಬ್ಯಾಂಕುಗಳಲ್ಲಿ 9 ಪರ್ಸೆಂಟ್ ಬಡ್ಡಿಯಲ್ಲಿ ಎಲ್ಲರಿಗೂ ಸಾಲ ಸಿಗುತ್ತಿದೆ. ಆದರೆ ಇಲ್ಲಿ ಈಗಲೂ ಕೂಡ 9 ಪರ್ಸೆಂಟ್ ಬಡ್ಡಿಯನ್ನೇ ಇಟ್ಟಿದ್ದಾರೆ. ಇದಕ್ಕೆ ಕಾರಣ ಕೆ.ಜಿ.ಐ.ಡಿ. ಲಾಸ್‌ನಲ್ಲಿದೆಯೇ ಎನ್ನುವಂಥಾದ್ದನ್ನು ಹೇಳಬೇಕು. ಏಕೆಂದರೆ 1990ರಲ್ಲಿ ಸಾವಿರ ರೂಪಾಯಿಗೆ 98 ರೂಪಾಯಿ ಬೋನಸ್ ಕೊಡುತ್ತಿದ್ದರು. ಈಗ 2004ರಲ್ಲಿ ಒಂದು ಸಾವಿರ ರೂಪಾಯಿಗೆ 86 ರೂಪಾಯಿ ಬೋನಸ್ ಕೊಡುತ್ತಿದ್ದೀರಿ. ಈಗ ವಿಮೆಯ ಪಾಲಿಸಿಗಳು ಮೂರು ಪಟ್ಟು ಜಾಸ್ತಿಯಾಗಿವೆ. ಅದಕ್ಕಾಗಿ ಈಗ ಸಾಲದ ಬಡ್ಡಿ ದರವನ್ನು ಕಡಿಮೆ ಮಾಡಿ ಬೋನಸ್ ದರವನ್ನು ಜಾಸ್ತಿ ಮಾಡಬೇಕೆಂಬುದು ಸರ್ಕಾರಿ ನೌಕರರ ಬೇಡಿಕೆ ಆಗಿದೆ. ದಯವಿಟ್ಟು ಮಾನ್ಯ ಉಪಮುಖ್ಯಮಂತ್ರಿಗಳು ಇದಕ್ಕೆ ಉತ್ತರಿಸಬೇಕಾಗಿ ವಿನಂತಿ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಅವರು ಹಿಂದೆ ಮನೆ ಕಟ್ಟಲಿಕ್ಕೆ 9 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಡುತ್ತಿದ್ದರು. ಆಗ ಬ್ಯಾಂಕುಗಳಲ್ಲಿ ಜಾಸ್ತಿ ಇತ್ತು ಮತ್ತು ಇವರು ಶೇಕಡಾ 9ರಲ್ಲಿ ಕೊಡುತ್ತಿದ್ದರು. ಈಗ ಬ್ಯಾಂಕುಗಳಲ್ಲಿ ಬಡ್ಡಿದರವನ್ನು ಕಡಿಮೆ ಮಾಡಿದ್ದಾರೆ. ಇವರು ಏಕೆ ಕಡಿಮೆ ಮಾಡಿಲ್ಲ ಎಂಬುದು ಅವರ ಪ್ರಶ್ನೆ. ಈಗಲೂ 9 ಪರ್ಸೆಂಟ್‌ಗೇ

ನಾವು ಕೊಡುತ್ತಿದ್ದೇವೆ. ಆಮೇಲೆ ಬೋನಸ್‌ನಲ್ಲಿ ಐದು ರೂಪಾಯಿ ಕಡಿಮೆಯಾಗಿದೆಯಲ್ಲಾ, ಆ ಐದು ರೂಪಾಯಿ ಕಡಿಮೆಯಾಗಿರುವುದು ಆ್ಯಕ್ಚುಯರಿ ಅಂತ ಅವರೇನು ಶಿಫಾರಸ್ಸು ಮಾಡುತ್ತಾರೆ, ಅದರ ಮೇಲೆ ಸಾವಿರಕ್ಕೆ 90 ರೂಪಾಯಿ ಬೋನಸ್ ಕೊಡಬೇಕೆಂದು ಮಾಡಿರುವುದು. ಅದು 90 ಇರುವುದನ್ನು ಐದು ರೂಪಾಯಿ ಕಡಿಮೆ ಮಾಡಿದರು. ಏಕೆಂದರೆ ಬ್ಯಾಂಕ್ ಬಡ್ಡಿದರ ಎಲ್ಲಾ ಕಡಿಮೆಯಾಗಿದೆಯೆಂದು ಅದಕ್ಕೋಸ್ಕರ ಕಡಿಮೆ ಮಾಡಿದ್ದಾರೆ. ಅದನ್ನು 2000–02ನೇ ಇಸವಿಯಲ್ಲಿ ಆ ಐದು ರೂಪಾಯಿ ಏನು ವ್ಯತ್ಯಾಸ ಇದೆಯಲ್ಲಾ, ಅದನ್ನು ಕೊಡತಕ್ಕಂಥದ್ದನ್ನು ಮಾಡುತ್ತಾ ಇದ್ದೇವೆ.

ಪ್ರಶ್ನೆ 71 (620)

ಅಧ್ಯಕ್ಷರು : ಮಾನ್ಯ ರಾಜೇಂದ್ರವರ್ಮರವರೇ, ಈಗ ನಿಮ್ಮ ಪ್ರಶ್ನೆಗೆ ಇಪ್ಪತ್ತು ದಿನಗಳ ಕಾಲಾವಕಾಶವನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಮಾನ್ಯ ಸಚಿವರು ತಮಗೆ ಒದಗಿಸುವುದಕ್ಕೆ ನಾನು ಹೇಳುತ್ತೇನೆ.

ಶ್ರೀ ರಾಜೇಂದ್ರ ವರ್ಮ : ಅಧ್ಯಕ್ಷರೇ, ಇಪ್ಪತ್ತು ದಿವಸ ಸದನವೇ ನಡೆಯುವುದಿಲ್ಲ. ಈಗ ನಾವು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಉತ್ತರ ಅಪೇಕ್ಷೆ ಮಾಡಿದರೆ ಅದಕ್ಕೆ ಉತ್ತರವೇ ಇಲ್ಲವೆಂದರೆ ಈಗ ಏನು ಮಾಡುವುದು ಎಂಬುದು ನಮಗೆ ಒಂದು ದೊಡ್ಡ ಪ್ರಶ್ನೆಯಾಗಿದೆ....

ಅಧ್ಯಕ್ಷರು : ಉಪ ಮುಖ್ಯಮಂತ್ರಿಗಳೇ, ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಪ್ರಶ್ನೆಗೆ ತಾವು ಸಮಯ ಕೇಳಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಕರ್ನಾಟಕದ ಗಡಿಭಾಗದಲ್ಲಿ ಮೂರು ವರ್ಷಗಳಿಂದ ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಕೊಡಲಾಗಿದೆ..... ಈ ವಿವರಗಳನ್ನು ತರಿಸಬೇಕಾಗುತ್ತದೆ. ಇದಕ್ಕೆಲ್ಲಾ ಸಮಯ ಬೇಕಾಗುತ್ತದೆ. ತಮಗೆ ಉತ್ತರವನ್ನು ಕಳಿಸಿ ಕೊಡುತ್ತೇನೆ.

ಅಧ್ಯಕ್ಷರು : ಈಗ ನೀವು ಸಾಕಷ್ಟು ವಿವರಗಳನ್ನು ಕೇಳಿದ್ದೀರಿ. ಆ ವಿವರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ತರಿಸಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆಯೆಂದು ಹೇಳಿದ್ದಾರೆ. ಆ ಎಲ್ಲಾ ವಿವರಗಳು ಇರುವ ತಮ್ಮ ಪ್ರಶ್ನೆಗೆ ಉತ್ತರವನ್ನು ನಾನು ಕಳುಹಿಸಿಕೊಡುತ್ತೇನೆ.

ಶ್ರೀ ರಾಜೇಂದ್ರ ವರ್ಮ : ಒಂದು ವಿನಂತಿ ಏನೆಂದರೆ ಸದನ ಮುಗಿಯುವುದರೊಳಗೆ ಎಲ್ಲಾ ಉತ್ತರ ನನಗೆ ಸಿಗಬೇಕು. ಒಂದು ಉಪಪ್ರಶ್ನೆಯನ್ನು ನಾನು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.....

ಅಧ್ಯಕ್ಷರು : ಪ್ರಶ್ನೆಗೆ ಉತ್ತರವನ್ನೇ ಅವರು ಕೊಟ್ಟಿಲ್ಲ. ನಿಮ್ಮ ಪ್ರಶ್ನೆಗೆ ಅವರು ಕಾಲಾವಕಾಶ ಕೇಳಿದ್ದಾರೆ.

ಶ್ರೀ ರಾಜೇಂದ್ರ ವರ್ಮ: ಪ್ರಶ್ನೆಗೆ ಉತ್ತರವೇ ಇಲ್ಲ. ಆದರೂ ಕೂಡ ನಾನು ಅವರಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ..

ಅಧ್ಯಕ್ಷರು : ಅವರು ಉತ್ತರ ಕಳುಹಿಸಿಲ್ಲ, ಕಾಲಾವಕಾಶ ಕೇಳಿದ್ದಾರೆ.